## ಜೆಎಸ್ಎಸ್ ಮಹಾವಿದ್ಯಾಪೀಠ

# ಜೆಎಸ್ಎಸ್ ಅಕಾಡೆಮಿ ಆಫ್ ಟೆಕ್ನಿಕಲ್ ಎಜುಕೇಶನ್, ಬೆಂಗಳೂರು

## ಕನ್ನಡ ರಾಜ್ಯೋತ್ಸವ ಆಚರಣೆ

2021 ರ ನವೆಂಬರ್ 8 ಮತ್ತು 9 ರಂದು ನಮ್ಮ ಕಾಲೇಜಿನಲ್ಲಿ ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಯಿತು. ಇದರ ನಿಮಿತ್ತ ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ಸಿಬ್ಬಂದಿಗಳಿಗಾಗಿ ವಿವಿಧ ಕನ್ನಡ ಭಾಷೆಗೆ ಸಂಬಂಧಿಸಿಧ ಸ್ಪರ್ಧೆಗಳನ್ನು ನಡೆಸಲಾಯಿತು.

ನವೆಂಬರ್ 9 ರಂದು ಕಾಲೇಜು ಆವರಣದಲ್ಲಿ ಧ್ವಜಾರೋಹಣವನ್ನು ನಡೆಸಿ ನಂತರ ಉದ್ಘಾಟನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕನ್ನಡದ ಹೆಸರಾಂತ ಕವಿ "ಹನಿಗವನಗಳ ರಾಜ" ಮುಖ್ಯ ಅತಿಥಿಗಳಾದ ಶ್ರೀ . ಎಚ್ ಡುಂಡಿರಾಜ್ ರವರು ಕಾರ್ಯಕ್ರಮ ಉದ್ಘಾಟಿಸಿದರು. ಸಮಾರಂಭದಲ್ಲಿ ಶ್ರೀ ಶಿವಪ್ರಕಾಶ್, ಬ್ಯಾಂಕ್ ಮ್ಯಾನೇಜರ್ ಕಾರ್ಪೊರೇಷನ್ ಬ್ಯಾಂಕ್, ಬೆಂಗಳೂರು ರವರು ಗೌರವ ಅತಿಥಿಗಳಾಗಿ ಭಾಗವಹಿಸಿದ್ದರು. ಸಮಾರಂಭದ ಅಧ್ಯಕ್ಷತೆಯನ್ನು ಪ್ರಾಂಶುಪಾಲರಾದ ಡಾ.ಎಂ.ವಿ. ಲಟ್ಟೆ ವಹಿಸಿದ್ದರು. ಈ ಸಂದರ್ಭದಲ್ಲಿ ನಮ್ಮ ಸಂಸ್ಥೆಯ ಆಡಳಿತಾಧಿಕಾರಿ ಶ್ರೀ ವೀರೇಶ್ ಸಿ ಎಸ್ ಹಾಗು ಡೀನ್ ವಿದ್ಯಾರ್ಥಿ ಕಲ್ಯಾಣ ಡಾ.ಬಿ ಪಿ ಶಿವಕುಮಾರ್ ರವರು ಉಪಸ್ಥಿತರಿದ್ದರು.

ಇಡೀ ಕಾರ್ಯಕ್ರಮವನ್ನು ವಿದ್ಯಾರ್ಥಿ ಸಂಯೋಜಕರು ಉತ್ತಮವಾಗಿ ಆಯೋಜಿಸಿದ್ದರು. ಸಮಾರಂಭದ ನಿರೂಪಣೆಯನ್ನು ನಿಧಿ ನಾಯಕ್ ISE 5A, ಜಗದೀಶ್ ಎಂ. IEM 7A ನಿರ್ವಹಿಸಿದರು. ಆವಾಹನಾ ಗೀತೆಯನ್ನು ಶ್ರವಂತಿ E&C 3A ಹಾಡಿದರು. ಪ್ರಜ್ವಲ್ ಬಿ CSE 5B ಸ್ವಾಗತಿಸಿದರು. ಧನ್ಯವಾದವನ್ನು ನಿಶಿತಾ ಸಿಂಗ್ CSE 5B ಅವರು ಮಾಡಿದರು.

ಮುಖ್ಯ ಅತಿಥಿ ಶ್ರೀ. ಹೆಚ್ ಡುಂಡಿರಾಜ್ ಅವರು ನಮ್ಮ ದಿನನಿತ್ಯದ ಜೀವನದಲ್ಲಿ ಕನ್ನಡ ಭಾಷೆಯ ಮಹತ್ವವನ್ನು ಹಲವು ಚುಟುಕು ಕವನಗಳ ಮೂಲಕ ಪ್ರೇಕ್ಷಕರನ್ನು ರಂಜಿಸಿದರು ಹಾಗು ಸಮಾಜಕ್ಕೆ ಅನೇಕ ಅರ್ಥಪೂರ್ಣ ಸಂದೇಶಗಳನ್ನು ತಿಳಿಸಿದರು. ಗೌರವ ಅತಿಥಿಗಳಾದ ಶ್ರೀ ಶಿವಪ್ರಕಾಶ್ ಅವರು ಬ್ಯಾಂಕಿಂಗ್ ವ್ಯವಹಾರಗಳಲ್ಲಿನ ತಮ್ಮ ಅನುಭವಗಳ ಉದಾಹರಣೆಗಳನ್ನು ತೆಗೆದುಕೊಂಡು ಕನ್ನಡ ಭಾಷೆಯ ಬಗ್ಗೆ ವಿವರಿಸಿದರು. ಅಧ್ಯಕ್ಷೀಯ ಭಾಷಣದಲ್ಲಿ ಪ್ರಾಂಶುಪಾಲರಾದ ಶ್ರೀ ಎಂ.ವಿ. ಲಟ್ಟೆ ಕನ್ನಡ ರಾಜ್ಯೋತ್ಸವದಲ್ಲಿ ಭಾಗವಹಿಸುವ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳ ಉತ್ಸಾಹವನ್ನು ಪ್ರಸ್ತಾಪಿಸಿದರು. ಇಬ್ಬರೂ ಅತಿಥಿಗಳು ತಮ್ಮ ಕವಿತೆಗಳು ಮತ್ತು ಇತರ ಚಟುವಟಿಕೆಗಳ ಮೂಲಕ ಕನ್ನಡ ಭಾಷೆಯ ಮಹತ್ವವನ್ನು ಎತ್ತಿ ಹಿಡಿಯಲು ಆಸಕ್ತಿ ತೋರಿದ್ದಕ್ಕಾಗಿ ಧನ್ಯವಾದಗಳನ್ನು ಅರ್ಪಿಸಿದರು. ಎಲ್ಲಾ ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ಸಿಬ್ಬಂದಿ ಕಾರ್ಯಕ್ರಮಕ್ಕೆ ಸಾಕ್ಷಿಯಾದರು.

ಕನ್ನಡ ರಾಜ್ಯೋತ್ಸವದ ನಿಮಿತ್ತ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ನಡೆಸಿದ ಚಟುವಟಿಕೆಗಳ ಪಟ್ಟಿ ಮತ್ತು ವಿಜೇತರ ಪಟ್ಟಿ ಈ ಕೆಳಗಿನಂತಿದೆ:

ಕಾರ್ಯಕ್ರಮಗಳ ವಿವರಗಳು -

| | |
|---|---|
| **ಕಾರ್ಯಕ್ರಮದ ಹೆಸರು** | ಆಶುಭಾಷಣ |
| **ವಿದ್ಯಾರ್ಥಿ ಸಂಯೋಜಕರು** | ನೇಹಾ ಪಾಟೀಲ್ |
| **ಸಂಯೋಜಕರು** | ಗಣಿತ ವಿಭಾಗ |
| **ವಿಜೇತರು** | 1 ನೇ ಸ್ಥಾನ: ಪ್ರಜ್ವಲ್ ಡಿ CSE-1JS19CS119<br>2 ನೇ ಸ್ಥಾನ: ಜಗದೀಶ್ಎಂ IEM-1JS18IM012<br>3 ನೇ ಸ್ಥಾನ: ಗ್ರೀಟಾ ಪರ್ಲ್ CSE-1JS18CS055 |

| | |
|---|---|
| **ಕಾರ್ಯಕ್ರಮದ ಹೆಸರು** | ರಂಗೋಲಿ |
| **ವಿದ್ಯಾರ್ಥಿ ಸಂಯೋಜಕರು** | ಸಾಗರಿಕಾ |
| **ಸಂಯೋಜಕರು** | ರಸಾಯನಶಾಸ್ತ್ರ ವಿಭಾಗ |
| **ವಿಜೇತರು** | 1 ನೇ ಸ್ಥಾನ: ಅಮೃತ HP- EC-1JS19EC015<br>ಹರ್ಷಿತಾ ಆರ್- EC-1JS19EC053<br>2 ನೆ ಸ್ಥಾನ: ಶಿಲ್ಪಾ ದೇವಾಡಿಗ-CSE-1JS19CS156<br>3 ನೇಸ್ಥಾನ: ಗ್ರೀಟಾ ಪರ್ಲ್-CSE-1JS18CS055 |

| | |
|---|---|
| **ಕಾರ್ಯಕ್ರಮದ ಹೆಸರು** | ನಾನ್ ಕನ್ನಡಿಗನಿಂದ ನಾನೂ ಕನ್ನಡಿಗ |
| **ವಿದ್ಯಾರ್ಥಿ ಸಂಯೋಜಕರು** | ಲಿಖಿತಾ ಮತ್ತು ಪ್ರೇರಣಾ ಜಿಕೆ |
| **ಸಂಯೋಜಕರು** | ಭೌತಶಾಸ್ತ್ರ ವಿಭಾಗ |
| **ವಿಜೇತರು** | 1 ನೇ ಸ್ಥಾನ: ಅಮನದೀಪ್ ನೆಹ್ರಾ - ISE- 1JS19IS009<br>2 ನೆ ಸ್ಥಾನ: ಶ್ರೇಯಾ ಪ್ರಸಾದ್-ISE-1JS19IS092<br>3 ನೇ ಸ್ಥಾನ: ಸಾಯಿ ಜ್ಯೋತ್ಸನಾ -CSE- 1JS19CS181 |

| | |
|---|---|
| **ಕಾರ್ಯಕ್ರಮದ ಹೆಸರು** | ಪ್ರಬಂಧ |
| **ವಿದ್ಯಾರ್ಥಿ ಸಂಯೋಜಕರು** | ವಿನಯ್ ಚೈತನ್ಯ |
| **ಸಂಯೋಜಕರು** | ರಸಾಯನಶಾಸ್ತ್ರ ವಿಭಾಗ |

| | |
|---|---|
| **ವಿಜೇತರು** | 1 ನೇ ಸ್ಥಾನ: ಶಿಲ್ಪಾ-CSE-1JS19CS156<br>2 ನೇ ಸ್ಥಾನ: ಕಿಶನ್ ಜೆ ಶೆಟ್ಟಿ-CSE-1JS20CS080<br>3 ನೇ ಸ್ಥಾನ: ಅಕ್ಷಯ್ ಕುಮಾರ್-ME-1JS19ME007 |

| | |
|---|---|
| **ಕಾರ್ಯಕ್ರಮದ ಹೆಸರು** | ರಸಪ್ರಶ್ನೆ |
| **ವಿದ್ಯಾರ್ಥಿ ಸಂಯೋಜಕರು** | ಸುಮುಖ |
| **ಸಂಯೋಜಕರು** | ಗಣಿತ ವಿಭಾಗ |
| **ವಿಜೇತರು** | 1 ನೇ ಸ್ಥಾನ: ಸುಜಿತ್ ಜೆ-IEM-1JS19IM400<br>ಜಗದೀಶ್ ಎಂ IEM-1JS18IM012<br>2 ನೇ ಸ್ಥಾನ: ರಾಜವೇಂದ್ರ ವಸಿಷ್ಟ ಎಲ್-CSE-1JS18CS192<br>ಸ್ಮಿತಾ ವಸಿಷ್ಟ ಎಲ್ CSE-1JS18CS156<br>3 ನೇಸ್ಥಾನ: ಸುಧನ್ವ ಎ ಆರ್-ME-1JS19ME002<br>ಗಿರೀಶ್ ಎಸ್- ME-1JS19ME025 |

ಸಂಸ್ಥೆಯ ಸಿಬ್ಬಂದಿ ವರ್ಗದವರಿಗೆ ಅಚ್ಚ ಕನ್ನಡ ದಲ್ಲಿ ಭಾಷಣ ಎಂಬ ಒಂದು ವಿಶೇಷ ಸ್ಪರ್ಧೆಯನ್ನು ಏರ್ಪಡಿಲಾಗಿತ್ತು. ವಿಜೇತರು: 1 ನೇ: ಡಾ ಚಾಮರಾಜ, ರಸಾಯನಶಾಸ್ತ್ರ ವಿಭಾಗ. 2 ನೇ: ಡಾ. ಸಿದ್ದೇಶ್ ಜಿ ಕೆ ಇ&ಸಿ ವಿಭಾಗ; 3 ನೇ: ಶ್ರೀ ಝೇಂಕರ್ ಸಿವಿಲ್ ವಿಭಾಗ. ಎಲ್ಲಾ ಸ್ಪರ್ಧೆಗಳೂ ಸೇರಿ ೨೦೦ಕ್ಕೂ ಹೆಚ್ಚು ಜನಗಳು ಭಾಗವಹಿಸಿದ್ದರು.ಮುಖ್ಯ ಅತಿಥಿಗಳು ಎಲ್ಲ ವಿಜೇತರಿಗೆ ಬಹುಮಾನ ವಿತರಣೆ ಹಾಗೂ ಪ್ರಮಾಣಪತ್ರಗಳನ್ನು ವಿತರಿಸಿದರು.

ಉದ್ಘಾಟನಾ ಸಮಾರಂಭ ಮುಗಿದ ನಂತರ ಕಾಲೇಜಿನ ಮುಂಭಾಗದಿಂದ ವೇದಿಕೆವರೆಗೆ ದ್ವಿಚಕ್ರ ಹಾಗು ಕಾರುಗಳ ಮೂಲಕ ರಾಜ್ಯೋತ್ಸವದ ಬ್ಯಾನರ್‌ಗಳನ್ನು ಹಿಡಿದು ವಿದ್ಯಾರ್ಥಿಗಳು ಪ್ರದರ್ಶನ ಮಾಡಿದರು. ನಂತರ ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ಬಿಂಬಿಸುವ ಹಲವಾರು ಕಾರ್ಯಕ್ರಮಗಳನ್ನು ವಿದ್ಯಾರ್ಥಿಗಳು ನಡೆಸಿಕೊಟ್ಟರು. ರಾಜ್ಯದ ಎಲ್ಲ ಭಾಗದ ಭಾಷೆಯನ್ನು ಬಿಂಬಿಸುವ ಕನ್ನಡ ಹಾಡುಗಳು, ಉಡುಗೆ ತೊಡುಗೆಗಳು, ನೃತ್ಯಗಳು ಹಾಗು ತಮಟೆ ವಾದ್ಯ ಮುಂತಾದ ಕಾರ್ಯಕ್ರಮಗಳ ಮೂಲಕ ವಿದ್ಯಾರ್ಥಿಗಳು ಪ್ರೇಕ್ಷಕರನ್ನು ರಂಜಿಸಿದರು. ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ವರ್ಗ ಎಲ್ಲರೂ ಭಾಗವಹಿಸಿ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

30/11/2021

1. ಧ್ವಜಾರೋಹಣ ಕಾರ್ಯಕ್ರಮ - 09/11/21





2. ಉದ್ಘಾಟನಾ ಕಾರ್ಯಕ್ರಮ - 09/11/21










3.ರಂಗೋಲಿ ಸ್ಪರ್ಧೆ - 08/11/21





4.ರಸಪ್ರಶ್ನೆ ಕಾರ್ಯಕ್ರಮ - 08/11/21





5. ಪ್ರಬಂಧ ಸ್ಪರ್ಧೆ - 08/11/21




6. ಆಶುಭಾಷಣ ಸ್ಪರ್ಧೆ - 08/11/21




7. ನಾನ್ ಕನ್ನಡಿಗನಿಂದ ನಾನೂ ಕನ್ನಡಿಗ - 08/11/21





8. ಸಾಂಸ್ಕೃತಿಕ ಕಾರ್ಯಕ್ರಮಗಳು - 09/11/21











